# ಎಡ ಬಲಗಳ ನಡುವೆ ಪವನ್

ಎಡ–ಬಲಗಳ ನಡುವೆ ಇಡೀ ಜಗತ್ತೇ ಒಡೆದುಹೋಗಿರುವ ಸನ್ನಿವೇಶದಲ್ಲಿ ನಾವಿದ್ದೇವೆ. ಎಡದ ವಿರುದ್ಧ ಧ್ವನಿಯೆತ್ತಿದರೆ ಬಲವೆಂದೂ ಬಲದ ವಿರುದ್ಧ ಧ್ವನಿಯೆತ್ತಿದರೆ ಎಡವೆಂದೂ ಎಡಬಿಡದೇ ಹಿಗ್ಗಾಮುಗ್ಗಾ ಟೀಕಿಸಿ ಜನರು ಮಾತಾಡಲೂ ಹೆದರುವ ಪರಿಸ್ಥಿತಿ ಉಂಟಾಗಿರುವುದನ್ನು ಅನುದಿನವೂ ನೋಡುತ್ತಲೇ ಇದ್ದೇವೆ. ನಿರ್ದೇಶಕ ಪವನ್ ಕುಮಾರ್ ಅವರೂ ಈಗ ಎಡ–ಬಲದ ಬಗ್ಗೆ ಯೋಚಿಸುತ್ತಿದ್ದಾರೆ. ಅದೂ ತೆಲುಗಿನಲ್ಲಿ! 'ಕುಡಿ ಎಡಮೈತೆ' ಎಂಬುದು ಅವರ ಉದ್ಗಾರ! ಅವರ ಬಾಯಲ್ಲಿ ಹೀಗೇಕೆ ಉದ್ಗಾರ ಹೊರಟಿದೆ? ಬಲ ಎಡವಾಗಿಸುವ ಯೋಚನೆ ಅವರಿಗೇಕೆ ಬಂತು?

ಹಾ, ತಾಳಿ ತಾಳಿ... ಪವನ್ ಹಾಗೆಲ್ಲ ಸಾಮಾಜಿಕ ಬಿಕ್ಕಟ್ಟುಗಳಲ್ಲಿ ಸಿಕ್ಕಿಹಾಕಿಕೊಳ್ಳುವವರಲ್ಲ. 'ಬಲ ಎಡವಾದರೆ' ಎಂಬ ಅರ್ಥದ ಶೀರ್ಷಿಕೆಯುಳ್ಳ ವೆಬ್ ಸೀರೀಸ್ ಒಂದನ್ನು ಅವರು ತೆಲುಗಿನ 'ಆಹಾ' ಎಂಬ ಓಟಿಟಿ ಫ್ಲಾಟ್‌ಫಾರಂಗಾಗಿ ನಿರ್ದೇಶಿಸಿದ್ದಾರೆ. ಇತ್ತೀಚೆಗೆ ಆ ವೆಬ್ ಸೀರೀಸ್‌ನ ಟೈಟಲ್ ಟೀಸರ್ ಕೂಡ ಸೋಷಿಯಲ್ ಮೀಡಿಯಾದಲ್ಲಿ ಪ್ರಕಟಿಸಿದ್ದಾರೆ.

'ಯು ಟರ್ನ್' ಸಿನಿಮಾ ನಂತರ ಪವನ್ ನಿರ್ದೇಶನದ ಯಾವುದೇ ಸಿನಿಮಾ ಬಿಡುಗಡೆ ಆಗಿಲ್ಲ. ಘೋಷಿಸಿದ್ದ 'ನಿಕೋಟಿನ್' ಕೂಡ ಶುರುವಾದಂತಿಲ್ಲ. ಈ ನಡುವೆ ತೆಲುಗಿಗೆ ಹೋಗಿ ವೆಬ್‌ಸೀರೀಸ್ ಒಂದನ್ನು ನಿರ್ದೇಶಿಸಿ ಬಂದಿದ್ದಾರೆ. ಕನ್ನಡದಲ್ಲಿ ಐವರು ನಿರ್ದೇಶಕರು ಕೂಡಿ ಮಾಡುತ್ತಿರುವ ಒಂದು ಪ್ರಯೋಗದಲ್ಲಿಯೂ ಅವರು ಭಾಗವಾಗಿದ್ದಾರೆ. 'ಬಲ ಎಡವಾದರೆ' ಜನರು ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದರ ಮೇಲೆ ಅವರ ತೆಲುಗು ಭವಿಷ್ಯವೂ ನಿಂತಿರುವ ಹಾಗಿದೆ. ■






# ಮಯೂರಿ ಸಿಹಿ ಸುದ್ದಿ!

'ಅಶ್ವಿನಿ ನಕ್ಷತ್ರ' ಧಾರಾವಾಹಿಯ ಮೂಲಕ ಜನಪ್ರಿಯತೆ ಗಳಿಸಿದ್ದ ಹುಬ್ಬಳ್ಳಿ ಮೂಲದ ಮಯೂರಿ 2015ರಲ್ಲಿ ತೆರೆಕಂಡ 'ಕೃಷ್ಣಲೀಲಾ' ಸಿನಿಮಾ ಮೂಲಕ ಚಿತ್ರರಂಗಕ್ಕೂ ಕಾಲಿಟ್ಟರು. ಮೊದಲ ಸಿನಿಮಾದಲ್ಲಿಯೇ ಅವರಿಗೆ ಯಶಸ್ಸಿನ ರುಚಿಯೂ ಸಿಕ್ಕಿತು. ಮುದ್ದು ಮುಖದ ಈ ಬೆಡಗಿ ನಂತರ 'ಇಷ್ಟಕಾಮ್ಯ', 'ನಟರಾಜ ಸರ್ವೀಸ್', 'ಕರಿಯ 2', 'ರ‍್ಯಾಂಬೊ 2' ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ.

ತೆಲುಗಿನಲ್ಲಿಯೂ ಒಂದು ಸಿನಿಮಾಗೆ ಸಹಿ ಹಾಕಿದ್ದರು. ವೃತ್ತಿಜೀವನದ ಏರುಮುಖದ ಹಾದಿಯಲ್ಲಿದ್ದಾಗಲೇ ಮಯೂರಿ ಮದುವೆಯ ಸುದ್ದಿ ಘೋಷಣೆ ಮಾಡಿ ಗಾಂಧಿನಗರದ ಮಂದಿಯನ್ನು ಅಚ್ಚರಿಗೆ ಕೆಡವಿದ್ದರು. ಇದೇ ವರ್ಷ ಜೂನ್‌ನಲ್ಲಿ ತಮ್ಮ ಬಾಲ್ಯಸ್ನೇಹಿತ ಅರುಣ್ ಜೊತೆಗೆ ಬೆಂಗಳೂರಿನಲ್ಲಿಯೇ ಸಪ್ತಪದಿ ತುಳಿದು ದಾಂಪತ್ಯ ಜೀವನಕ್ಕೆ ಅಡಿಯಿಟ್ಟಿದ್ದರು.

ಈಗ ಮಯೂರಿ ತಮ್ಮ ಅಭಿಮಾನಿಗಳಿಗೆ ಇನ್ನೊಂದು ಸಿಹಿಸುದ್ದಿ ನೀಡಿದ್ದಾರೆ. ಎಲ್ಲರೂ ದೀಪಾವಳಿಯ ಸಂಭ್ರಮದಲ್ಲಿ ಮುಳುಗಿದ್ದಾರೆ. ಆದರೆ ಮಯೂರಿ ಬದುಕಿನಲ್ಲಿ ಈ ದೀಪಾವಳಿಗೆ ವಿಶೇಷ ಮಹತ್ವವಿದೆ. ಯಾಕೆಂದರೆ ಹೊಸ್ತಿಲಲ್ಲಿ ಹಚ್ಚುವ ದೀಪದೊಟ್ಟಿಗೆ ಅವರ ಮಡಿಲಲ್ಲಿಯೂ ಬದುಕಿನ ಬೆಳಕು ಕುಡಿಯೊಡೆಯುತ್ತಿದೆ. ಹೌದು, ಮಯೂರಿ ಅಮ್ಮನಾಗುವ ಪುಳಕದಲ್ಲಿ ಮುಳುಗಿದ್ದಾರೆ.

ಹಬ್ಬದ ದಿನವೇ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಉಬ್ಬುಹೊಟ್ಟೆಯ ಫೋಟೊಶೂಟ್ ಚಿತ್ರಗಳನ್ನು ಪ್ರಕಟಿಸಿರುವ ಅವರು 'ನಾವು ಮೂವರಾಗುತ್ತಿದ್ದೇವೆ' ಎಂದು ಹೇಳಿಕೊಂಡಿದ್ದಾರೆ. 'ಹೊಸದೊಂದು ಆರಂಭ' ಎಂದೂ ಬರೆದುಕೊಂಡಿದ್ದಾರೆ. ಮಯೂರಿ ಅವರ ಬಾಳಸಂಗಾತಿ ಅರುಣ್ ಕೂಡ ಈ ಫೋಟೊಶೂಟ್‌ನಲ್ಲಿ ಭಾಗವಹಿಸಿದ್ದಾರೆ. ■